# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : **513** |
| **ಮಾನ್ಯ ಸದಸ್ಯರ ಹೆಸರು** | : **ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : **10.07.2023** |
| **ಉತ್ತರಿಸಬೇಕಾದ ಸಚಿವರು** | : **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿ ನವಜಾತ ಶಿಶುವಿನಿಂದ 15 ವರ್ಷಗಳವರೆಗಿನ ಮಕ್ಕಳಿಗೆ ಉಚಿತವಾಗಿ ನೀಡುವ ಲಸಿಕೆಗಳು ಯಾವುವು; ಅವುಗಳನ್ನು ಯಾವ ಅವಧಿಯಲ್ಲಿ ನೀಡಲಾಗುವುದು ಮತ್ತು ಯಾವ ಯಾವ ರೋಗಗಳ ವಿರುದ್ಧವಾಗಿ ನೀಡಲಾಗುತ್ತಿದೆ; (ವಿವರ ನೀಡುವುದು) | ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ 15 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಬಿಸಿಜಿ, ಓಪಿವಿ, ಐಪಿವಿ, ಹೆಪಟೈಟೀಸ್-ಬಿ ಪೆಂಟಾವಲೆಂಟ್, ಪಿಸಿವಿ, ರೋಟಾ, ವಿಟಮಿನ್-ಎ, ದಡಾರ -ರುಬೆಲ್ಲಾ, ಡಿಪಿಟಿ, ಟಿಡಿ ಮತ್ತು ಜೆಇ ಲಸಿಕೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಈ ಲಸಿಕೆಗಳನ್ನು ಯಾವ ಅವಧಿಯಲ್ಲಿ ಮತ್ತು ಯಾವ ಯಾವ ರೋಗಗಳ ವಿರುದ್ಧವಾಗಿ ನೀಡಲಾಗುವುದುದೆಂಬುದರ ಲಸಿಕಾ ವೇಳಾ ಪಟ್ಟಿಯ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಸರ್ಕಾರಿ ಉಚಿತ ಲಸಿಕೆಗಳ ಜೊತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಇತರೆ ಲಸಿಕೆಗಳ ಬಗೆಗಿನ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅವುಗಳು ಯಾವುವು; ಇವುಗಳನ್ನು ಯಾವ ರೋಗದ ವಿರುದ್ಧವಾಗಿ ನೀಡಲಾಗುತ್ತಿದೆ (ನೀಡುತ್ತಿದ್ದಲ್ಲಿ ವಿವರ ನೀಡುವುದು). | -ಹೌದು-<br>ಸರ್ಕಾರಿ ಲಸಿಕೆಗಳ ಜೊತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಇತರ ಲಸಿಕೆಗಳ ಬಗೆಗಿನ ಪಟ್ಟಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ) | ಖಾಸಗಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಈ ಲಸಿಕೆಗಳು ಮಕ್ಕಳಿಗೆ ಅತ್ಯಾವಶ್ಯಕವಾಗಿವೆಯೇ; ಇವುಗಳನ್ನು ಸರ್ಕಾರವೇ ಖರೀದಿಸಿ, ರಾಜ್ಯದ ಎಲ್ಲಾ ಮಕ್ಕಳಿಗೆ ನೀಡಲು ಸರ್ಕಾರದ ಚಿಂತನೆಗಳೇನು? (ವಿವರ ನೀಡುವುದು) | ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವನ್ನು ರಾಜ್ಯದಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲಾಗಿದೆ. National Expert Group on Vaccine Administration (NEGVAC), National Technical Advisory Group on Immunization (NTAGI) ತಜ್ಞರುಗಳ ಮತ್ತು Subject Expertಗಳ ಶಿಫಾರಸ್ಸಿನಂತೆ ಮಕ್ಕಳಿಗೆ ವಯಸ್ಸಿಗನುಗುಣವಾಗಿ ಅವಶ್ಯವಿರುವ ಲಸಿಕೆಗಳನ್ನು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ವೇಳಾಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಭಾರತ ಸರ್ಕಾರದಿಂದ ಸೇರ್ಪಡೆಗೊಳಿಸಲಾದ ಲಸಿಕೆಗಳನ್ನು ಮಾತ್ರವೇ ರಾಜ್ಯದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳಿಗೆ ಉಚಿತವಾಗಿ ಲಸಿಕಾಕರಣ ನಡೆಸಲು ಬಳಸಲಾಗುತ್ತಿದೆ. ಸದರಿ ಲಸಿಕೆಗಳು ಭಾರತ ಸರ್ಕಾರದಿಂದಲೇ ರಾಜ್ಯಗಳಿಗೆ ಸರಬರಾಜಾಗುತ್ತವೆ. |

**ಸಂಖ್ಯೆ: ಆಕುಕ 51 ಎಸ್.ಟಿ.ಕ್ಯೂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಸರ್ಕಾರಿ ಆಸ್ಪತ್ರೆಗಳ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ – ಲಸಿಕಾ ವೇಳಾಪಟ್ಟಿ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| ವಯಸ್ಸು | ಲಸಿಕೆ | ತಡೆಗಟ್ಟುವ ರೋಗ |
|---|---|---|
| ಹುಟ್ಟಿದ ಕೂಡಲೇ | ಹೆಪಟೈಟಿಸ್ ಬಿ | ಹೆಪಟೈಟಿಸ್ ಬಿ |
| | ಓ.ಪಿ.ವಿ – 0 | ಪೋಲಿಯೋ |
| | ಬಿ.ಸಿ.ಜಿ | ಬಾಲಕ್ಷಯ |
| 6 ವಾರ | ಓ.ಪಿ.ವಿ–1,<br>ರೋಟಾ–1,<br>ಐ.ಪಿ.ವಿ–1,<br>ಪಿ.ಸಿ.ವಿ–1,<br>ಪೆಂಟಾವೆಲೆಂಟ್–1 | ಪೋಲಿಯೋ,<br>ರೋಟಾವೈರಸ್ ಅತಿಸಾರ<br>ನ್ಯೂಮೊಕಾಕಲ್ ಕಾಯಿಲೆ<br>ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು, ಹೆಚ್ ಇನ್ಫ್ಲೂ ಏನ್‌ಜ಼ ಬಿ ಮತ್ತು ಹೆಪಟೈಟಿಸ್ ಬಿ |
| 10 ವಾರ | ಓ.ಪಿ.ವಿ–2<br>ರೋಟಾ–2<br>ಪೆಂಟಾವೆಲೆಂಟ್–2 | ಪೋಲಿಯೋ<br>ರೋಟಾವೈರಸ್ ಅತಿಸಾರ<br>ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು, ಹೆಚ್ ಇನ್ಫ್ಲೂ ಏನ್‌ಜ಼ ಬಿ ಮತ್ತು ಹೆಪಟೈಟಿಸ್ ಬಿ. |
| 14 ವಾರ | ಓ.ಪಿ.ವಿ–3<br>ರೋಟಾ–3<br>ಐ.ಪಿ.ವಿ–2<br>ಪಿ.ಸಿ.ವಿ–2<br>ಪೆಂಟಾವೆಲೆಂಟ್–3 | ಪೋಲಿಯೋ,<br>ರೋಟಾವೈರಸ್ ಅತಿಸಾರ<br>ನ್ಯೂಮೊಕಾಕಲ್ ಕಾಯಿಲೆ<br>ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು, ಹೆಚ್ ಇನ್ಫ್ಲೂ ಏನ್‌ಜ಼ ಬಿ ಮತ್ತು ಹೆಪಟೈಟಿಸ್ ಬಿ |
| 9 ತಿಂಗಳು | ದಡಾರ ರುಬೆಲ್ಲಾ–1<br>ಪಿ.ಸಿ.ವಿ–ವರ್ಧಕ<br>ಜೆಇ–1*<br>ವಿಟಮಿನ್ ಎ – 1<br>ಐ.ಪಿ.ವಿ–3 | ದಡಾರ ಮತ್ತು ರುಬೆಲ್ಲಾ<br>ನ್ಯೂಮೊಕಾಕಲ್ ಕಾಯಿಲೆ<br>ಮೆದಳು ಜ್ವರ (ಜಪಾನೀಸ್ ಎನ್ಸೆಫಲೈಟಿಸ್)<br>ಇರುಳು ಕುರುಡು<br>ಪೋಲಿಯೋ |
| 16–23 ತಿಂಗಳು | ದಡಾರ ರುಬೆಲ್ಲಾ –2<br>ಜೆಇ–2* | ದಡಾರ ಮತ್ತು ರುಬೆಲ್ಲಾ<br>ಮೆದಳು ಜ್ವರ (ಜಪಾನೀಸ್ ಎನ್ಸೆಫಲೈಟಿಸ್) |
| | ಓ.ಪಿ.ವಿ ವರ್ಧಕ<br>ಡಿಪಿಟಿ ವರ್ಧಕ–1 | ಪೋಲಿಯೋ<br>ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು |
| | ವಿಟಮಿನ್ ಎ – 2 | ಇರುಳು ಕುರುಡು |
| 5–6 ವರ್ಷ | ಡಿಪಿಟಿ ವರ್ಧಕ–2 | ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು |
| 10 ವರ್ಷ | ಟಿ.ಡಿ | ಗಂಟಲುಮಾರಿ ಮತ್ತು ಧನುರ್ವಾಯು |
| 16 ವರ್ಷ | ಟಿ.ಡಿ | |

# ಅನುಬಂಧ-2

| ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಲಸಿಕೆಗಳನ್ನು ಹೊರತುಪಡಿಸಿ ಖಾಸಗಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಇತರೆ ಲಸಿಕೆಗಳ ಮಾಹಿತಿ | | |
|---|---|---|
| **ವಯಸ್ಸು** | **ಲಸಿಕೆ** | **ತಡೆಗಟ್ಟುವ ರೋಗ** |
| 6 ತಿಂಗಳು | ಇನ್ಫ್ಲೂಎನ್‌ಜ | ಇನ್ಫ್ಲೂಎನ್‌ಜ |
| 7 ತಿಂಗಳು | ಇನ್ಫ್ಲೂಎನ್‌ಜ-2 | |
| 6 ರಿಂದ 9 ತಿಂಗಳು | ಟೈಪಾಯಿಡ್ ಸಿವಿ | ಟೈಪಾಯಿಡ್ |
| 9 ತಿಂಗಳು | ಎಂಎಂಆರ್-1 | ಗದಗಟ್ಟು , ದಡಾರ ಮತ್ತು ರುಬೆಲ್ಲಾ |
| 12 ತಿಂಗಳು | ಹೆಪಟೈಟೀಸ್ ಎ1 | ಹೆಪಟೈಟೀಸ್ ಎ |
| 15 ತಿಂಗಳು | ಎಂಎಂಆರ್-2<br>ವೆರಿಸೆಲ್ಲಾ-1 | ಗದಗಟ್ಟು , ದಡಾರ ಮತ್ತು ರುಬೆಲ್ಲಾ, ಸೀತಾಳೆ ಸಿಡುಬು (Chicken pox) |
| 16 ರಿಂದ 18 ತಿಂಗಳು | ಟಿ.ಡಿ.ಎ.ಪಿ (TDaP) | ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು |
| 18 ರಿಂದ 19 ತಿಂಗಳು | ಹೆಪಟೈಟೀಸ್ ಎ2<br>ವೆರಿಸೆಲ್ಲಾ-2 | ಹೆಪಟೈಟೀಸ್ ಎ<br>ಸೀತಾಳೆ ಸಿಡುಬು (Chicken pox) |
| 4 ರಿಂದ 6 ವರ್ಷ | ಎಂಎಂಆರ್-3, | ಗದಗಟ್ಟು , ದಡಾರ ಮತ್ತು ರುಬೆಲ್ಲಾ |
| 10 ರಿಂದ 12 ವರ್ಷ | ಹೆಚ್‌ಪಿವಿ<br>ಟಿ.ಡಿ.ಎ.ಪಿ (TDaP) | Human papilomavirus<br>ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು |
| 16 ವರ್ಷ | ಟಿ.ಡಿ.ಎ.ಪಿ (TDaP) | ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು |